ಪ್ರೌಢಶಾಲಾ, ಕಿರಿಯ ಕಾಲೇಜು, ಗ್ರಂಥಪಾಲಕ ಸಹಾಯಕರ ವೇತನದ ಬಗ್ಗೆ

1210 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) ಹೆಚ್.ಎಂ. ರೇವಣ್ಣ (ಮಾಗಡಿ): ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1985ರ ಪರಿಷ್ಕರಣ (ಅನಾಮಲಿ) ವೇತನ ಸಮಿತಿಯಿಂದ ಸಾರ್ವಜನಿಕ ಗ್ರಂಥಾಲಯ ಸಹಾಯಕರಿಗೂ ಮತ್ತು ಪ್ರೌಢಶಾಲಾ ಕಿರಿಯ ಕಾಲೇಜು ಗ್ರಂಥಾಪಾಲಕ ಸಹಾಯಕರಿಗೂ ಮಧ್ಯೆ ಇರುವ ವೇತನ ತಾರತಮ್ಯದ ನಿವಾರಣೆಯ ಬಗ್ಗೆ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆಯೇ?

ಆ) ಸಲ್ಲಿಸಿದ್ದಲ್ಲಿ, ಸರ್ಕಾರ ಈ ವರದಿಯ ಬಗ್ಗೆ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಶಿಕ್ಷಕರ ವರ್ಗಾವಣೆ ಕುರಿತು

1214 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 1990 ಸಾಮಾನ್ಯ ವರ್ಗಾವಣೆಯಿಂದಿಡಿದು ಇಲ್ಲಿಯ ತನಕ ಬೆಂಗಳೂರು ದಕ್ಷಿಣ ಮತ್ತು ಉತ್ತರ ಜಿಲ್ಲೆಗಳಿಗೆ ವರ್ಗಾವಣೆಯಾದ ಶಿಕ್ಷಕರ ಸಂಖ್ಯೆ ಏನು?

ಆ) ಈ ಮೇಲ್ಕಂಡ ಜಿಲ್ಲೆಗಳಿಂದ ವರ್ಗಾವಣೆ ಆಗಿ ಹೊರಗಡೆ ಹೋಗಿರುವ ಶಿಕ್ಷಕರ ಸಂಖ್ಯೆ ಎಷ್ಟು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು)

ಅ)	ಪ್ರಾಥಮಿಕ ಶಿಕ್ಷಣ	ಪ್ರೌಢ ಶಿಕ್ಷಣ
ಬೆಂಗಳೂರು ಉತ್ತರ ಜಿಲ್ಲೆ	121	46
ಬೆಂಗಳೂರು ದಕ್ಷಿಣ ಜಿಲ್ಲೆ	318	
ಒಟ್ಟು	439	
ಆ) ಬೆಂಗಳೂರು ಉತ್ತರ ಜಿಲ್ಲೆ	05	06
ಬೆಂಗಳೂರು ದಕ್ಷಿಣ ಜಿಲ್ಲೆ	26	
ಒಟ್ಟು	31	

ರಾಜ್ಯದಲ್ಲಿರುವ ಖಾಸಗಿ ಶಾಲೆಗಳ ಸಂಖ್ಯೆ

1209 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) , ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಖಾಸಗಿ ಶಾಲೆಗಳಿವೆ?

ಆ) ಇದರಲ್ಲಿ ಅನುದಾನಿತ ಶಾಲೆಗಳೆಷ್ಟು?

ಇ) ಅನುದಾನರಹಿತ ಶಾಲೆಗಳೆಷ್ಟು?

ಈ) ಅನುದಾನ ಸಂಹಿತೆ ನಿಯಮದಂತೆ ಎಷ್ಟು ಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ?

ಉ) *ಅನುದಾನ ಸಂಹಿತೆ ನಿಯಮ ಪಾಲಿಸದೇ ಇರುವ ಶಾಲೆಗಳ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು)

ಅ) 6877

ಆ) 4095

ಇ) 2782

ಈ) ಎಲ್ಲ ಶಾಲೆಗಳೂ ಅನುದಾನ ಸಂಹಿತೆ ನಿಯಮದಂತೆ ಕಾರ್ಯ ನಿರ್ವಹಿಸುತ್ತವೆ.

ಉ) ಪ್ರಶ್ನೆ ಉದ್ಭವಿಸುವುದಿಲ್ಲ.

ತುಮಕೂರು ಜಿಲ್ಲೆಯಲ್ಲಿರುವ ಪ್ರಾಥಮಿಕ ಶಾಲೆಗಳ ಬಗ್ಗೆ

284 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತುಮಕೂರು ಜಿಲ್ಲೆಯಲ್ಲಿರುವ ಒಟ್ಟು ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಪ್ರಾಥಮಿಕ ಶಾಲೆಗಳ ಸಂಖ್ಯೆ?*

ಆ) *ಇವುಗಳಲ್ಲಿ ಕುಣಿಗಲ್ ತಾಲ್ಲೂಕಿನಲ್ಲಿರುವ ಶಾಲೆಗಳ ಸಂಖ್ಯೆ?*

ಇ) *ಕುಣಿಗಲ್ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಶಾಲೆಗಳ ಪೈಕಿ ಆಂಗ್ಲ ಮತ್ತು ಕನ್ನಡ ಮಾಧ್ಯಮ ಶಾಲೆಗಳೆಷ್ಟು?*

ಈ) *1991-92ನೇ ಸಾಲಿಗೆ ತುಮಕೂರು ಜಿಲ್ಲೆಯಲ್ಲಿ ಕನ್ನಡ ಮತ್ತು ಆಂಗ್ಲ ಮಾಧ್ಯಮದ ಪ್ರಾಥಮಿಕ ಶಾಲೆಗಳನ್ನು ತೆರೆಯಲು ಮಂಜೂರಾತಿಗೆ ಪ್ರಸ್ತಾವನೆಗಳು ಯಾವುದಾದರೂ ಬಂದಿದೆಯೇ?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) :

ಅ) ತುಮಕೂರು ಜಿಲ್ಲೆಯಲ್ಲಿರುವ ಪ್ರಾಥಮಿಕ ಶಾಲೆಗಳು :

ಸರ್ಕಾರಿ	2885
ಅನುದಾನಿತ	35
ಅನುದಾನೇತರ	126

ಆ) ಕುಣಿಗಲ್ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಶಾಲೆಗಳು :

ಸರ್ಕಾರಿ	385
ಅನುದಾನಿತ	07
ಅನುದಾನೇತರ	09

ಇ)

	ಕನ್ನಡ ಮಾಧ್ಯಮ	ಆಂಗ್ಲ ಮಾಧ್ಯಮ
ಸರ್ಕಾರಿ	346	-
ಅನುದಾನಿತ	06	-
ಅನುದಾನೇತರ	08	01